**O.S.No.333/2019**
**D.W-2**

**<u>ಸಾಕ್ಷಿ ಯನ್ನು ದಿಃ07.02.2026 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಬಿ ಆರ್ ಆರ್ ವಕೀಲರಿಂದ:</u>**

ನಾನು 10ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಎರಡನೇ ಬಾರಿ ಸಾಕ್ಷಿದಾರನಾಗಿ ಈ ದಾವೇ ಮತ್ತೊಂದು ದಾವೇಗೆ ಬಂದಿರುತ್ತೇನೆ. ಪ್ರತಿವಾದಿ ನನ್ನ ಸಂಬಂಧಿಕರಲ್ಲ, ನನ್ನ ಸ್ನೇಹಿತರು. ನಾನು ಅಸಲು ದಾವಾ ಸಂ.73/2020 ರಲ್ಲಿ ಪ್ರತಿವಾದಿ ನನ್ನ ಸ್ನೇಹಿತ ಎಂದು ಹೇಳಿರುತ್ತೇನೆ. ನಾನು ದಾವಾ ಆಸ್ತಿ ಊರಿನವನಲ್ಲ. ಸದರಿ ಊರಿನಲ್ಲಿ ನನಗೆ ಯಾವ ಜಮೀನು ಇಲ್ಲ. ಸದರಿ ಊರಿನಲ್ಲಿ ಯಾರಿಗೆ ಯಾವ ಆಸ್ತಿ ಇದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ನನ್ನ ಜಮೀನು ಇಲ್ಲ. ಈ ದಾವೇಯ ಬಗ್ಗೆ ಗೊತ್ತಿದ್ದ ಕಾರಣ, ಸಾಕ್ಷ್ಯ ನುಡಿಯಲು ಬಂದಿರುತ್ತೇನೆ. ಬೀರಗನಳ್ಳಿಗೆ ನಾನು ಓಡಾಡುತ್ತಿದ್ದ ಕಾರಣ, ಆಸ್ತಿಯ ಬಗ್ಗೆ ನನಗೆ ಗೊತ್ತಾಗಿರುತ್ತದೆ.

2. ಸಾಕ್ಷಿಗೆ ವಾದ ಪತ್ರದ ಸಂಪೂರ್ಣ ವಿವರಗಳನ್ನು ಓದಿ ಹೇಳಲಾಗಿ, ಸಾಕ್ಷಿಯು ಸದರಿ ಆಸ್ತಿಯನ್ನು ತಾನು ನೋಡಿರುವುದಾಗಿ ನುಡಿಯುತ್ತಾರೆ. ಸದರಿ ಆಸ್ತಿ ಇಂದಿಗೂ ವಾಸ್ತವದಲ್ಲಿ ಅಸ್ತಿತ್ವದಲ್ಲಿ ಇದೆ ಎಂದರೆ ಸರಿ. ದಾವಾ ಆಸ್ತಿಯ ಕಂದಾಯ ದಾಖಲೆಗಳನ್ನು ನಾನು ನೋಡಿಲ್ಲ. ದಾವಾ ಆಸ್ತಿಯಲ್ಲಿ ವಾದಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಈ ದಾವೇಯನ್ನು ವಾದಿ ಹೂಡಿರುತ್ತಾರೆ. ನನ್ನ ಪ್ರಕಾರ, ಪ್ರತಿವಾದಿ ದಾವಾ ಆಸ್ತಿ ಸ್ವಾಧೀನದಲ್ಲಿರುತ್ತಾರೆ. ಪ್ರತಿವಾದಿ ಸ್ವಾಧೀನದಲ್ಲಿರುವ ಚೆಕ್ಕುಬಂದಿ ಪೂರ್ವಕ್ಕೆ ಮಾದಪ್ಪನ ಗಡಿ, ಪಶ್ಚಿಮಕ್ಕೆ ತುಮಕೂರು ಮದ್ದೂರು

ರಸ್ತೆ, ಉತ್ತರಕ್ಕೆ ವಾದಿಯ ಜಮೀನು, ದಕ್ಷಿಣಕ್ಕೆ ವೆಂಕಟಾಚಾರಿ. ಈ ಮೇಲಿನ ಆಸ್ತಿ 17 ಗುಂಟೆ ಇರುತ್ತದೆ. ಸದರಿ ಆಸ್ತಿಯ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಸದರಿ ಆಸ್ತಿಯ ಬಗ್ಗೆ ವಾದಿ ಪ್ರತಿವಾದಿ ಕಿತ್ತಾಡುತ್ತಿದ್ದ ಕಾರಣ, ನನಗೆ ತಿಳಿದಿರುತ್ತದೆ. ದಾವಾ ಆಸ್ತಿಯಲ್ಲಿ ಏನು ಬೆಳೆ ಇರುವುದಿಲ್ಲ.

3. ನಾರಾಯಣಾಚಾರಿ ಮತ್ತು ಅವರ ಮಕ್ಕಳನ್ನು ನಾನು ನೋಡಿರುತ್ತೇನೆ. ನಾರಾಯಣಾಚಾರಿ ಸರ್ವೆ ನಂ.29 ರ ಕೆಲವು ಭಾಗಕ್ಕೆ ಮಾಲೀಕರಾಗಿದ್ದರು ಎಂದರೆ ಸರಿ. ನಾರಾಯಣಾಚಾರಿಯವರು ಮೊದಲು ಉಳುಮೆ ಮಾಡುತ್ತಿದ್ದ ಜಮೀನು ಮಾರಾಟ ಮಾಡಿರುವ ಕಾರಣ, ಅವರು ಉಳುಮೆ ಮಾಡುತ್ತಿಲ್ಲ ಎಂದರೆ ಸರಿ. ಸದರಿ ಜಮೀನನ್ನು ಖರೀದಿ ಮಾಡಿರುವವರು ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ. ನಾರಾಯಣಾಚಾರಿಯವರ ಮಕ್ಕಳು ಜಮೀನನ್ನು ವಾದಿಯ ತಂದೆಗೆ 15 ಗುಂಟೆಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ವಾದಿಯ ತಂದೆ ಬದುಕಿರುವವರೆಗೆ ಆತ ಮತ್ತು ಆತನ ಮರಣದ ನಂತರ ಆತನ ಹೆಂಡತಿ ಮಕ್ಕಳು 15 ಗುಂಟೆಗೆ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ. ವಾದಿಯು ಈಗಲೂ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ಪ್ರತಿವಾದಿ ಈಗ ಉಳುಮೆ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಆ ರೀತಿ ಪ್ರತಿವಾದಿ ಯಾವಾಗಲಿಂದ ಉಳುಮೆ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ.

4. ದಾವಾ ಆಸ್ತಿಯನ್ನು ವಾದಿ ಮತ್ತು ಆತನ ತಂದೆ ಉಳುಮೆ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು 15 ಗುಂಟೆಯನ್ನು ಉಳುಮೆ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ನಾನು 15 ಗುಂಟೆಗೆ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ. ಸದರಿ 15 ಗುಂಟೆಗೆ ಈ ದಾವೇ ನಡೆಯುತ್ತಿದೆ. ದಾವಾ ಆಸ್ತಿಗೆ ವಾದಿಯ ಕುಟುಂಬದವರು ಮಾಲೀಕರು ಮತ್ತು ಸ್ವಾಧೀನದಲ್ಲಿದ್ದರು. ಪ್ರತಿವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ವಿಚಾರಗಳು ನನಗೆ ಗೊತ್ತು. ಸದರಿ ಪ್ರಮಾಣ ಪತ್ರದಲ್ಲಿರುವ ವಿಚಾರಗಳು ವಾಸ್ತವಿಕತೆಗೆ ವಿರುದ್ದವಿದೆ ಎಂದರೆ ಸರಿಯಲ್ಲ.

5. ಪ್ರತಿವಾದಿ ವಾದಿಯ ಸ್ವಾಧೀನಕ್ಕೆ ತೊಂದರೆ ನೀಡಿದ ಕಾರಣ, ಈ ದಾವೇ ಹೂಡಿರುತ್ತಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

*( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್.